ಮೂಲಕ ಆ ಎಲ್ಲ ಸಿಬ್ಬಂದಿಗಳು ಮತ್ತು ಅಲ್ಲಿ ಇದ್ದ ಇತರೆ ವಾಹನ ಮತ್ತೊಂದನ್ನು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಕೊಟ್ಟು ಆ ಕಛೇರಿಯನ್ನು ಎಲ್ಲ ರೀತಿಯ ವ್ಯವಸ್ಥೆಯನ್ನು ಕೊಡುವ ವ್ಯವಸ್ಥೆ ನಿರ್ಮಾಣ ಮಾಡಿದ್ದೇವೆ. ವಾಹನಗಳಿಲ್ಲದೆ ಕೊರತೆ ಇದೆ, ಸಿಬ್ಬಂದಿಗಳಿಲ್ಲದೆ ಕೊರತೆ ಇದೆ. ಅವರು ಹೇಳಿದಹಾಗೆ, ಇಡೀ ಜಿಲ್ಲೆಯಲ್ಲಿ ಮೂರು ಮಾತ್ರ ಸಬ್–ಡಿವಿಜನ್ ಕಟ್ಟಡಗಳಿವೆ. ಅದು ಬಿಟ್ಟರೆ, ಬೇರೆ ಕಡೆ ಇಲ್ಲ. ಈಗಾಗಲೇ ಅದರ ಬಗ್ಗೆ ತಮ್ಮ ಜೊತೆ ಎಲ್ಲ ಚರ್ಚೆ ಮಾಡಿದ್ದೇನೆ. ಸದುದ್ದೇಶದಿಂದ ಈ ಕಾರ್ಯಕ್ರಮ ಮಾಡಿಕೊಂಡಿದ್ದೇವೆ. ಹೊರತು ಇದರಲ್ಲಿ ಮುಚ್ಚಬೇಕೆಂದು ದುರುದ್ದೇಶ ಏನೂ ಇಲ್ಲ. ಜಿಲ್ಲಾ ಕೇಂದ್ರಗಳನ್ನು ಸುಸಜ್ಜಿತವಾಗಿ ಎಲ್ಲ ವ್ಯವಸ್ಥೆ ನಿರ್ಮಾಣ ಮಾಡಿ ಅಲ್ಲಿಯೂ ಕೂಡ ಈಗಾಗಲೇ ಸಿಬ್ಬಂದಿ ಇಲ್ಲ, ವಾಹನಗಳೂ ಇಲ್ಲ, ಕೆಲವು ಕಡೆ ಟಿಎ:ಡಿಎ ಕೊಟ್ಟಿಲ್ಲ ಎನ್ನುವುದನ್ನೂ ಸಾಕಷ್ಟು ಮಂತ್ರಿಗಳೂ ಕೂಡ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡುವುದರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಹೊರತು ಅಲ್ಲಿ, ಇಲ್ಲಿ ಎನ್ನುವ ಯಾವುದೇ ತಾರತಮ್ಯದ ಮೇಲೆ ನಾವು ಮುಚ್ಚುವ ಕೆಲಸ ಮಾಡಿಲ್ಲ. ತಮ್ಮ ಗಮನಕ್ಕೂ ತಂದಿದ್ದೇವೆ. ತಾವು ಹೇಳಿದ ಹಾಗೂ ಮಾಡಿದ್ದೇವೆ. ಅವರ ಜೊತೆಯಲ್ಲಿ ಕೂಡ ಮಾತನಾಡಿದ್ದೇವೆ. ಸಚಿವರು ಕೆಲವರು ಹೇಳಿದರು. ಅವರ ಗಮನಕ್ಕೂ ತಂದೆ, ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಮಲ್ಲಿಕಾರ್ಜುನ ಖರ್ಗೆ ಅವರ ಜಿಲ್ಲೆಗೆ ಹೋಗಿದೆ ಎಂದರೆ ಯಾವ ಕಾರಣಕ್ಕಾಗಿದೆ ಎಂದು ಅವರಿಗೂ ಕನ್‌ವಿನ್ಸ್ ಮಾಡಿದ್ದೇವೆ. ದಯಮಾಡಿ, ತಾವು ಸಹಕರಿಸುತ್ತೀರಾ ಎಂದು ನಾನು ಭಾವಿಸುತ್ತೇನೆ.

ವಿಷಯ:– ರಾಜ್ಯದ ಪ್ರಮುಖ ನಗರಗಳಲ್ಲಿ ಭಿಕ್ಷಾಟನೆ ಅಧಿಕಗೊಂಡಿದ್ದು ಅದನ್ನು ನಿಂತ್ರಿಸುವಲ್ಲಿ ಸರ್ಕಾರ ವಿಫಲವಾಗಿರುವುದರ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ರಸ್ತೆಗಳಲ್ಲಿ ಭಿಕ್ಷುಕರ ಕಾಟ ಬಹಳ ಜಾಸ್ತಿಯಾಗಿಬಿಟ್ಟು, ಓಡಾಡುವುದು ತೊಂದರೆಯಾಗಿದೆ. ಬೆಂಗಳೂರಿನಲ್ಲಂತು ನೀವೆಲ್ಲಾದರೂ ನಿಲ್ಲಿಸಿ, ಯಾವ ಟ್ರಾಫಿಕ್ ಆದರೂ ನಿಲ್ಲಿ ಯಾರಾದರೊಬ್ಬರು ಬರುವುದು ಭಿಕ್ಷೆಗೆ ನಿಲ್ಲುವುದು, ಕಾರ್‌ಗಳಲ್ಲಿ ಏನಾದರೂ ಓಡಾಡಬೇಕೆಂದರೆ, ಭಾರೀ ಅಗಾಧವಾದ ಟ್ರಾಫಿಕ್ ನಲ್ಲಿ ಅವರದೊಂದು ಮಧ್ಯೆ ಅಡ್ಡ ಬರುವುದು, ಬೆಳಿಗ್ಗೆ ಕಬ್ಬನ್ ಪಾರ್ಕ್‌ನಲ್ಲಿ ವಾಕ್ ಹೋದರೂ ಭಿಕ್ಷುಕರು ಬರುವುದಕ್ಕೆ ಶುರು ಮಾಡಿದ್ದಾರೆ. ಅಲ್ಲಿ ಕೂಡ ಗಾಡಿ ತಳ್ಳಿಕೊಂಡು ಬಂದು ಏನಾದರೂ ಕೊಡಿ ಎಂದು ಹೇಳಿ ಬರುತ್ತಾರೆ. ಕಾನೂನು ಪ್ರಕಾರ ಪೊಲೀಸ್ ನವರು ಅವರನ್ನು ತೆಗೆದುಕೊಂಡು ಹೋಗಿ ಎಲ್ಲಾದರೂ ಒಂದು ಕಡೆ ರಿಹ್ಯಾಬಿಲೇಟೇಷನ್ ಸೆಂಟರ್‌ಗೆ ಕೂರಿಸಿ, ಅವರಿಗೇನಾದರೂ ಪುನರ್ ವಸತಿ ಮಾಡಬೇಕಾದುದು ಇದ್ದರೂ ಕೂಡ ಬೆಂಗಳೂರಿನಲ್ಲಿ ಪೋಲೀಸ್ ನವರಿಗೆ ಕಣ್ಣಿಲ್ಲವೇ? ಅಥವಾ ನಮಗೇ ಕಣ್ಣಿದೆಯೇ? ಎನ್ನುವ ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದನ್ನು ಎಲ್ಲಾದರೂ

ಒಂದು ಕಡೆ ಕಡಿಮೆ ಮಾಡಬೇಕು. ಇಲ್ಲದಿದ್ದರೆ, ಓಡಾಡುವುದು ಬಹಳ ತೊಂದರೆಯಾಗುತ್ತದೆ. ಯಾವ ಸರ್ಕಲ್ ನೋಡುವುದಿಲ್ಲ, ಟ್ರಾಫಿಕ್ ಎಷ್ಟು ಜಾಮ್ ಆಗುತ್ತದೆಂದು ನೋಡುವುದಿಲ್ಲ, ಏನಾದರೂ ಕೊಡಿ ಎಂದು ತಕ್ಷಣ ಮಧ್ಯೆ ಬಂದು ಬಿಡುತ್ತಾರೆ. ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಅವರನ್ನು ಹಾಗೆ ರಸ್ತೆಗಳಲ್ಲಿ ಭಿಕ್ಷೆ ಬೇಡುವುದಕ್ಕೆ ಬಿಡಬಾರದು, ಅವರಿಗೇನಾದರೂ ಪುನರ್ ವಸತಿ ಮಾಡಬೇಕೆಂದು ಹೇಳಿ ಕಾನೂನು ಇದೆ. ಅದನ್ನು ಏನಾದರೂ ಮಾಡುತ್ತೀರಾ? ತೀರಾ ಜಾಸ್ತಿಯಾಗಿದೆ. ಯಾರು ಬೇಕೋ ಅವರು ರೋಡ್ ತಡೆಯುತ್ತಾರೆ. ಗಣಪತಿಗೆ ಹಣ ಕೊಡಬೇಕೆಂದು ಹೇಳುತ್ತಾರೆ. ಆಂಜನೇಯನಿಗೆ ಹಣ ಕೊಡಬೇಕೆಂದು ಹೇಳುತ್ತಾರೆ. ಇದನ್ನು ಬೇಡ ಎನ್ನುವವರು ಎಂಎಲ್ ಎ ಕೆಟ್ಟವರಾಗುತ್ತೇವೆ. ಇದನ್ನು ಎಲ್ಲಾದರೂ ಒಂದು ಕಡೆ ಕಾಯಕಲ್ಪ ಕೊಡಲಿಕ್ಕೆ ಏನಾದರೂ ಸರ್ಕಾರ ಮನಸ್ಸು ಮಾಡುತ್ತದೆಯೇ? ಎಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನೀಡಿದ ಸೂಚನಾ ಪತ್ರಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಉತ್ತರ:

"ರಾಜ್ಯದ ಪ್ರಮುಖ ನಗರಗಳಲ್ಲಿ ಅದರಲ್ಲೂ ಮುಖ್ಯವಾಗಿ ಮಹಾನಗರಗಳಾದ ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗಾ, ಬೆಳಗಾವಿಗಳೂ ಸೇರಿದಂತೆ ಅನೇಕ ಪಟ್ಟಣ ಪ್ರದೇಶಗಳಲ್ಲಿ ಭಿಕ್ಷಾಟನೆ ಅಧಿಕಗೊಂಡು, ರಸ್ತೆಗಳಲ್ಲಿ ವಾಹನಗಳನ್ನು ಅಡ್ಡಗಟ್ಟಿ ಭಿಕ್ಷೆ ಬೇಡುತ್ತಿದ್ದರೂ ಸಹ ಸರ್ಕಾರ ಅವರನ್ನು ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲರಾಗಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.

ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ 1975 ಸೆಕ್ಷನ್ 3ರನ್ವಯ ಕರ್ನಾಟಕದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಈ ಕಾಯಿದೆಯನ್ನು ಉಲ್ಲಂಘಿಸಿ ಭಿಕ್ಷೆ ಬೇಡುವವರನ್ನು ನಿರಾಶ್ರಿತರ ಪರಿಹಾರ ಕೇಂದ್ರದ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಯವರು ದಸ್ತಗಿರಿ ಮಾಡಬಹುದು. 16 ವರ್ಷ ವಯಸ್ಸು ತುಂಬದೇ ಇರುವ ಹುಡುಗ ಅಥವಾ 18 ವರ್ಷ ತುಂಬದೇ ಇರುವ ಹುಡುಗಿ ಇವರು ಈ ಕಾಯಿದೆಯಿಂದ ಹೊರತಾಗಿರುತ್ತಾರೆ.

ಭಿಕ್ಷಾಟನೆಯಲ್ಲಿ ತೊಡಗಿರುವ ತಾಯಂದಿರು ಅಥವಾ ತಂದೆಯ ಜೊತೆ ಮಕ್ಕಳಿದ್ದಲ್ಲಿ ಮಕ್ಕಳನ್ನು ಬೇರ್ಪಡಿಸದೆ ಮಾನವೀಯ ದೃಷ್ಟಿಯಿಂದ ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರಲು ಅವಕಾಶ ಮಾಡಿಕೊಡಲಾಗುತ್ತದೆ. ಬಂಧಿಸಿ ಭಿಕ್ಷುಕರನ್ನು

ತಾಲ್ಲೂಕು ದಂಡನಾಧಿಕಾರಿಗಳ ಮುಂದೆ ಹಾಜರುಪಡಿಸಿ ಸದರಿಯವರ ಆದೇಶದಂತೆ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರಿಸಲಾಗುವುದು.

ರಾಜ್ಯದ ಎಲ್ಲಾ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಸಿಬ್ಬಂದಿಯು ಗಸ್ತು ತಿರುಗಿ ಭಿಕ್ಷುಕರನ್ನು ಬಂಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ಮಾಡುವವರ ಬಗ್ಗೆ ಪೊಲೀಸ್ ಇಲಾಖೆಯಿಂದ ಹಾಗೂ ಸಾರ್ವಜನಿಕರಿಂದ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಮಾಹಿತಿ ಬಂದ ಕೂಡಲೆ ಸಮಿತಿಯ ಸಿಬ್ಬಂದಿಯವರಿಂದ ಭಿಕ್ಷುಕರನ್ನು ಬಂಧಿಸಿ ಕರೆತರಲಾಗುವುದು.

ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗಾ ಬೆಳಗಾವಿ ಹಾಗೂ ಇತರೆ ನಗರಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳಿದ್ದು ಬಂಧನದಲ್ಲಿರುವ ಭಿಕ್ಷುಕರ ವಿವರವನ್ನು ಪಟ್ಟಿಯಲ್ಲಿ ಲಗತ್ತಿಸಿರುತ್ತದೆ.

ವಾರದಲ್ಲಿ ಕನಿಷ್ಠ ನಾಲ್ಕು ದಿನ ಇಂತಹ ಬಂಧನಾಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಭಿಕ್ಷಾಟನೆ ಒಂದು ಸಾಮಾಜಿಕ ಪಿಡುಗು, ಭಿಕಾಟನೆಯನ್ನು ಪ್ರೋತ್ಸಾಹಿಸಬಾರದು ಎಂಬ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕರಪತ್ರಗಳನ್ನು ಹಂಚಲಾಗುತ್ತಿದೆ.

ಹಾಗೂ ಸಾರ್ವಜನಿಕ ತಿಳುವಳಿಕೆಗಾಗಿ ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸಿ ದೂರದರ್ಶನದಲ್ಲಿ ಪ್ರಸಾರ ಮಾಡಲಾಗಿದೆ. ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ನಿಷೇಧಿಸುವ ಬಗ್ಗೆ ಸೂಚನಾ ಫಲಕಗಳನ್ನು ಬೆಂಗಳೂರು ನಗರದ ಮುಖ್ಯ ಪ್ರದೇಶಗಳಲ್ಲಿ ಹಾಕಲಾಗಿದೆ.

ಬಂಧನದಲ್ಲಿರುವ ನಿರಾಶ್ರಿತರುಗಳಿಗೆ ಕೇಂದ್ರದಲ್ಲಿ ಊಟ, ವಸತಿ, ಸಮವಸ್ತ್ರ, ಹಾಸಿಗೆ–ಹೊದಿಕೆ ನೀಡಲಾಗುವುದು, ಹಾಗೂ ದೃಢಕಾಯ ನಿರಾಶ್ರಿತರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ಅಂದರೆ ಹೊಲಿಗೆ, ನಾರಿ ಹೆಣಿಕೆ, ಮ್ಯಾಟ್ ಮೇಕಿಂಗ್, ಮರಗೆಲಸ, ಕಮ್ಮಾರಿಗೆ, ಬುಕ್ ಬೈಡಿಂಗ್, ತೋಟಗಾರಿಗೆ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದ್ದು ತರಬೇತಿ ಅವಧಿಯಲ್ಲಿ ಪ್ರತಿ ದಿನ 5/– ರೂ.ಗಳನ್ನು ದಿನಗೂಲಿ ನೀಡಲಾಗುವುದು.

ಮಾನ್ಯ ಶಾಸಕರು ತಿಳಿಸಿರುವ ಮುಖ್ಯ ಮಹಾನಗರಗಳಾದ ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗ ಹಾಗೂ ಬೆಳಗಾವಿ ನಗರಗಳಲ್ಲಿ ಭಿಕ್ಷಾಟನೆಯನ್ನು ನಿಯಂತ್ರಿಸಲು ನಿರಾಶ್ರಿತರ ಪರಿಹಾರ ಕೇಂದ್ರಗಳಿದ್ದು ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ಮಾಡುವವರನ್ನು ನಿರಾಶ್ರಿತರ ಪರಿಹಾರ ಕೇಂದ್ರದ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಯವರಿಂದ ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಇರಿಸಿ ಭಿಕ್ಷಾಟನೆಯನ್ನು ನಿಯಂತ್ರಿಸಲಾಗುತ್ತಿದೆ.

2005–06ನೇ ಸಾಲಿನಲ್ಲಿ ಕೇಂದ್ರ ಪರಿಹಾರ ಸಮಿತಿಯ ವ್ಯಾಪ್ತಿಗೊಳಪಡುವ ಈ ಕೆಳಕಂಡ 14 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಬಂಧಿಸಲಾದ ಭಿಕ್ಷುಕರ ವಿವರಗಳು (01–04–05ರಿಂದ 30–06–05ರವರೆಗೆ)

ಕ್ರ.ಸಂ.	ಜಿಲ್ಲೆ	ಒಟ್ಟು ಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
1.	ಬೆಂಗಳೂರು	4701	37	607
2.	ವಿಜಾಪುರ	27	10	37
3.	ಬಳ್ಳಾರಿ	17	12	29
4.	ಬೆಳಗಾವಿ	25	0	25
5.	ಚಿತ್ರದುರ್ಗ	13	5	18
6.	ದಾವಣಗೆರೆ	14	00	14
7.	ಗುಲ್ಬರ್ಗ	41	01	42
8.	ಹುಬ್ಬಳ್ಳಿ–ಧಾರವಾಡ	53	13	66
9.	ಕೋಲಾರ	38	16	54
10.	ಮೈಸೂರು	116	23	139
11.	ಮಂಗಳೂರು(ದ.ಕ)	104	12	116
12.	ರಾಯಚೂರು	20	00	20
13.	ಶಿವಮೊಗ್ಗ	80	00	80
14.	ತುಮಕೂರು	26	00	26
	ಒಟ್ಟು	**1044**	**229**	**1273**